# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ – 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ:22ನೇ ಜನವರಿ, 2021**

*****

**ಸಂಖ್ಯೆ :14**

ವಿಧಾನ ಪರಿಷತ್ತಿನ 141ನೇ ಅಧಿವೇಶನದಲ್ಲಿ ದಿನಾಂಕ:23.09.2020ರಂದು ಮಾನ್ಯ ಸದಸ್ಯರಾದ ಡಾ:ವೈ.ಎ. ನಾರಾಯಣಸ್ವಾಮಿ ಅವರು ನಿಯಮ 72ರಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಡಾ.ದೇವರಾಜ ಅರಸು ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಆದಿ ಜಾಂಭವ ಅಭಿವೃದ್ಧಿ ನಿಗಮ, ಬಂಜಾರು ಅಭಿವೃದ್ಧಿ ನಿಗಮ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯ ಕಾಮಗಾರಿಗಳಲ್ಲಿ ಟೆಂಡರ್ ರಹಿತ ಅನುಷ್ಠಾನ, ಅವ್ಯವಹಾರ, ಅಕ್ರಮ, ಭ್ರಷ್ಟಾಚಾರ ಜರುಗಿದ್ದು, ಸರ್ಕಾರದ ಹಣ ದುರುಪಯೋಗವಾಗಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲಾಗಿದ್ದು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)ರ ರೀತ್ಯಾ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು ಶ್ರೀ ಡಾ: ವೈ.ಎ. ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ 08 ಸದಸ್ಯರನ್ನೊಳಗೊಂಡಂತೆ ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿಯನ್ನು ಸಲ್ಲಿಸುವುದು.

ಶ್ರೀಯುತರುಗಳಾದ :

1. ಬಸವರಾಜ ಪಾಟೀಲ್ ಇಟಗಿ
2. ಎಸ್.ರವಿ
3. ಶ್ರೀನಿವಾಸ ಮಾನೆ
4. ಸುನೀಲ್ ಸುಬ್ರಮಣಿ ಎಂ.ಪಿ
5. ನಿರಾಣಿ ಹನುಮಂತ ರುದ್ರಪ್ಪ
6. ಕಾಂತರಾಜು (ಬಿ.ಎಂ.ಎಲ್)
7. ಬಿ.ಎಂ. ಫಾರೂಕ್
8. ಪ್ರತಾಪ್ ಸಿಂಹ ನಾಯಕ್

## ಪರಿಶೀಲನಾ ಅಂಶಗಳು

1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಡಾ.ದೇವರಾಜ ಅರಸು ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಆದಿ ಜಾಂಭವ ಅಭಿವೃದ್ಧಿ ನಿಗಮ, ಬಂಜಾರು ಅಭಿವೃದ್ಧಿ ನಿಗಮ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು ಅನುಸರಿಸುತ್ತಿರುವ ಮಾನದಂಡಗಳಾವುವು; ಅವುಗಳನ್ನು ನಿಯಮಾನುಸಾರ ಪಾಲಿಸದಿರುವ ಬಗ್ಗೆ ಪರಿಶೀಲಿಸುವುದು;

2. 2015-16 ರಿಂದ 2019-20ರವರೆಗೆ ಕೆ.ಟಿ.ಟಿ.ಪಿ. ಕಾಯ್ದೆ ಉಲ್ಲಂಘಿಸಿ ಟೆಂಡರ್‌ಗಿಂತ ಹೆಚ್ಚಿನ ಸಂಖ್ಯೆಯ ಗಂಗಾ ಕಲ್ಯಾಣ ಯೋಜನೆಯ ಕಾಮಗಾರಿಗಳನ್ನು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳ ಎಲ್ಲಾ ನಿಗಮ ಕೇಂದ್ರ ಕಛೇರಿಗಳಿಗೆ ನಿಯಮ ಬಾಹಿರವಾಗಿ ನಿರ್ದೇಶನ ನೀಡಿ ವಿವಿಧ ಜಿಲ್ಲೆಗಳಿಂದ ಅನುಷ್ಠಾನಗೊಳಿಸಿ ಬಿಲ್ ಪಾವತಿ ಮಾಡಿರುವ ಕುರಿತು ಪರಿಶೀಲಿಸುವುದು;

3. ಈ ಯೋಜನೆಯಡಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಆಳಕ್ಕಿಂತ ಹೆಚ್ಚಿನ ಆಳದ ಲೆಕ್ಕ ತೋರಿಸಿ ಬಿಲ್ ಪಾವತಿಸಿರುವ/ನಿಗದಿತ ಪ್ರಮಾಣದಲ್ಲಿ ನೀರು ಲಭ್ಯವಾಗದಿದ್ದರೂ ಬಿಲ್ ಪಾವತಿಸಿರುವುದು/ಅನರ್ಹರು ಫಲಾನುಭವಿಗಳು ಅಲ್ಲದವರ ಜಮೀನಿನಲ್ಲಿ ಅಕ್ರಮವಾಗಿ ಕೊಳವೆ ಬಾವಿ ಕೊರೆದಿರುವುದು/ಸ್ವಂತವಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ಬಿಲ್ ಪಾವತಿ ಮಾಡಿರುವುದು ಹಾಗೂ ಕೊಳವೆ ಬಾವಿ ಕೊರೆಯದೇ ಬಿಲ್ ಪಾವತಿಸಿರುವುದರ ಬಗ್ಗೆ ಪರಿಶೀಲಿಸುವುದು;

4. ವಿವೇಚನಾ ಕೋಟಾದಡಿಯಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಅಧಿಕಾರಿಗಳು ಮತ್ತು ಮಧ್ಯವರ್ತಿಗಳಿಂದ ನಡೆದಿರುವ ಅವ್ಯವಹಾರಗಳ ಬಗ್ಗೆ ಪರಿಶೀಲಿಸುವುದು;

5. 2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ರಾಜ್ಯಾದ್ಯಂತ ಕೊಳವೆ ಬಾವಿಗಳನ್ನು ಕೊರೆಸಲು ಬಿಡುಗಡೆ ಮಾಡಿರುವ ಅನುದಾನವನ್ನು ನಿಯಮಾನುಸಾರ ಉದ್ದೇಶಕ್ಕನುಗುಣವಾಗಿ ಬಳಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸುವುದು;

6. ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಸಚಿವರ ಮತ್ತು ಮಂಡಳಿಯ ಪದಾಧಿಕಾರಿಗಳಿಗೆ (discretionary quota) ಮೀಸಲಿರುವ ಶೇ.20ನ್ನು ಕಾರ್ಯಗತಗೊಳಿಸಲು ಅನುಸರಿಸುವ /ಅನುಸರಿಸಿರುವ ಮಾನದಂಡಗಳಾವುವು; ಅವುಗಳನ್ನು ಟೆಂಡರ್ ಮೂಲಕ ಮಾಡದಿರುವ ಬಗ್ಗೆ ಪರಿಶೀಲಿಸುವುದು;

7. ವಿವಿಧ ನಿಗಮಗಳಡಿಯಲ್ಲಿ ಇದುವರೆಗೆ ತಾಲ್ಲೂಕುವಾರು ಎಷ್ಟು ಕೊಳವೆ ಬಾವಿಗಳನ್ನು ಕೊರೆಸಲು ಅವಕಾಶ ಕಲ್ಪಿಸಲಾಗಿದೆ; ಏಜೆನ್ಸಿಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳ ಬಗ್ಗೆ ಪರಿಶೀಲಿಸುವುದು;

8. ದಿನಾಂಕ:13.03.2019ರಲ್ಲಿ ನಿವೃತ್ತ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಇ.ವೆಂಕಟಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಪರಿಶೀಲನಾಂಶಗಳಾವುವು; ಸದರಿ ಅಂಶಗಳ ಮೇಲೆ ಸಮಿತಿಯು ಕೈಗೊಂಡಿರುವ ಕ್ರಮಗಳಾವುವು;

9. ವಿವಿಧ ನಿಗಮಗಳಡಿ ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಫಲಾನುಭವಿಗಳ ಆಯ್ಕೆ ಸಮಿತಿಯ ರೂಪುರೇಷೆಗಳೇನು; ಗುತ್ತಿಗೆದಾರರು ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳ ಕುರಿತು ಪರಿಶೀಲಿಸುವುದು;

10. 2015–16ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕೊಳವೆ ಬಾವಿಗಳು/ಬೋರ್‌ವೆಲ್‌ಗಳು ಅರ್ಹ ಫಲಾನುಭವಿಗಳಿಗೆ ಹಂಚಿಕೆಯಾಗದಿರುವ ಕುರಿತು ಪರಿಶೀಲಿಸುವುದು;

11. ಕೊಳವೆ ಬಾವಿಗಳಿಗೆ ವಿದ್ಯುದೀಕರಣ ಮಾಡಲು ಎಷ್ಟು ಕಾಲಮಿತಿಯನ್ನು ನೀಡಲಾಗಿದೆ; ಎಜೆನ್ಸಿಯವರು ಕಾಲಮಿತಿಯೊಳಗೆ ನೋಂದಣಿ ಮಾಡಿಸದೆ ಕಾಲಹರಣ ಮಾಡಿ ವಿದ್ಯುದೀಕರಣಗೊಳಿಸದಿರುವುದರ ಮೇಲೆ ಕ್ರಮಕೈಗೊಳ್ಳುವ ಬಗ್ಗೆ ಪರಿಶೀಲಿಸುವುದು;

12. 2018ರಲ್ಲಿ ತನಿಖಾ ತಂಡಗಳನ್ನು ರಚಿಸಲು ಕಾರಣಗಳೇನು? ಅದರಿಂದಾಗಿರುವ ಪ್ರಯೋಜನಗಳ ಕುರಿತು ಪರಿಶೀಲಿಸುವುದು;

13. ಟೆಂಡರ್ ಪ್ರಕ್ರಿಯೆಯನ್ನು ನಡೆಸದೆ ಹಣಕಾಸು ಇಲಾಖೆಯಿಂದ ಸೆಕ್ಷನ್ 4(ಜಿ) ವಿನಾಯಿತಿ ಪಡೆಯದೆ ಕೊಳವೆ ಬಾವಿ ಕೊರೆಸುವ ಕಾಮಗಾರಿಗಳ ಕಾರ್ಯಾದೇಶ ಮಾಡಿರುವ ಉದ್ದೇಶವೇನು? ಸದರಿ ಕಾರ್ಯಾದೇಶ ಪತ್ರದಲ್ಲಿ ಟೆಂಡರ್‌ದಾರರಲ್ಲದಿದ್ದರೂ ಗುತ್ತಿಗೆದಾರರಿಗೆ ನೀಡಿರುವುದರ ಬಗ್ಗೆ ಪರಿಶೀಲಿಸುವುದು;

14. ಗುತ್ತಿಗೆದಾರರಿಂದ ಇಎಂಡಿ ಕಟ್ಟಿಸಿಕೊಳ್ಳದೆ ಕಾಮಗಾರಿಯನ್ನು ನೀಡಿರುವುದಲ್ಲದೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬಿಲ್ಲು ಮತ್ತು ಹಣ ಪಾವತಿಸಿರುವ ಬಗ್ಗೆ ಪರಿಶೀಲಿಸುವುದು;

15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನಾಗರೀಕ ಹಕ್ಕುಗಳ ಉಲ್ಲಂಘನೆಯಾಗಿರುವುದೇ ಎಂಬುದರ ಬಗ್ಗೆ ಪರಿಶೀಲಿಸುವುದು ಹಾಗೂ ಅಧಿಕಾರ, ಹಣ ದುರ್ಬಳಕೆಯಲ್ಲಿ ಕ್ರಿಮಿನಲ್ ಪಿತೂರಿ (criminal conspiracy) ನಡೆದಿರುವುದೇ ಎಂಬುದರ ಬಗ್ಗೆ ಪರಿಶೀಲಿಸುವುದು;

16. ಸಮಿತಿಯು ಪರಿಶೀಲಿಸಬಯಸುವ ಇತರೆ ಅಂಶಗಳು.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ.**